## ಅಧ್ಯಾಯ - ೬

# ಸಮಾರೋಪ

ಶಿವರಾಮ ಕಾರಂತರ ಕಾದಂಬರಿಗಳು ಸಮಾಜಶಾಸ್ತ್ರದ ಸ್ವರೂಪವನ್ನು ಒಳಗೊಂಡಿವೆ. ಆದ್ದರಿಂದ ಅವರ ಕಾದಂಬರಿಗಳು ಒಂದು ಸಮಾಜ ಹಾಗೂ ಕುಟುಂಬ ಕೇಂದ್ರಿತ ಸ್ತ್ರೀಯರ ಸಾಮಾಜಿಕ, ಆರ್ಥಿಕ, ವ್ಯಾವಹಾರಿಕ, ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯನ್ನು ಹೊಂದಿವೆ. ಕಾರಂತರು ಮಾತೃಪ್ರಧಾನ ಕುಟುಂಬ ಪದ್ಧತಿ, ಮಾತೃ ಅಧಿಕಾರಕೇಂದ್ರಿತ ನೆಲೆಗಳನ್ನು ಗಮನದಲ್ಲಿಟ್ಟುಕೊಂಡು ಕಾದಂಬರಿಗಳನ್ನು ಬರೆದಿದ್ದಾರೆ. ಆದ್ದರಿಂದ ಶಿವರಾಮ ಕಾರಂತರನ್ನು ವಾಸ್ತವವಾದಿ ಪರಂಪರೆಯ ಸಾಹಿತಿಗಳ ಸಾಲಿನಲ್ಲಿ ಗುರುತಿಸಲಾಗಿದೆ. ಕಾರಂತರು ಸ್ತ್ರೀ ಸಮಾನತೆಯ ಕುರಿತು ವಸ್ತುನಿಷ್ಠವಾಗಿ ಸಾಹಿತ್ಯ ನಿರ್ಮಾಣ ಮಾಡುವ ಹೊತ್ತಿಗೆ ಜಗತ್ತಿನಲ್ಲಿ 'ಸ್ತ್ರೀವಾದ' ಚಳುವಳಿಯ ಕಾಲಘಟ್ಟ ಅಡಿಯಿಟ್ಟಿತ್ತು. ಹೀಗಾಗಿ ಆಧುನಿಕ ಕನ್ನಡ, ಸಾಹಿತ್ಯ ಪರಂಪರೆಯಲ್ಲಿ ಶಿವರಾಮ ಕಾರಂತರು ಸ್ತ್ರೀವಾದಿ ಚಿಂತನೆಯ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಇದಕ್ಕೆ ಪೂರಕವಾಗಿ ಕಾರಂತರ ಕಾದಂಬರಿಗಳು ಮಾನವೀಯ ಮೌಲ್ಯಗಳನ್ನು, ಜೀವಪರ ಕಾಳಜಿಯನ್ನು ಶೋಧಿಸುತ್ತವೆ.

ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ಕಾರಂತರು ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದರು. ಆಗ ಸ್ವಾತಂತ್ರ್ಯ, ಸಮಾನತೆಯ ಆಂದೋಲನವು ಭಾರತೀಯರಲ್ಲಿ ಜಾಗೃತಗೊಳ್ಳುತ್ತಿದ್ದ ಕಾಲವಾಗಿತ್ತು. ಸಾಮಾಜಿಕ ಸುಧಾರಣವಾದಿ ನಿಲುವಿನ ಕಾರಂತರು ಇಲ್ಲಿಯ ಮಹಿಳೆಯರಲ್ಲಿ ಜಾಗೃತಿಯನ್ನು ಮೂಡಿಸುವ ಗುರುತರವಾದ ಹೊಣೆಗಾರಿಕೆಯು ಅವರಲ್ಲಿತ್ತು. ಆದ್ದರಿಂದ ಕಾರಂತರು ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ವಿಧವೆಯರ ವಿಮೋಚನೆ, ಸತಿ ಸಹಗಮನ ನಿರಾಕರಣೆ, ವೇಶ್ಯಾ ಪದ್ಧತಿಯ ವಿರುದ್ಧ ಹೋರಾಟ - ಮುಂತಾದ ಸ್ತ್ರೀವಾದಿ ನಿಲುವುಗಳನ್ನು ಗಮನದಲ್ಲಿಟ್ಟುಕೊಂಡು ಕಾದಂಬರಿಯನ್ನು ಬರೆಯಲು ತೊಡಗಿದರು. ಹಾಗಾಗಿ ಅವರ ಕಾದಂಬರಿಗಳ ಅಧ್ಯಯನ ಸ್ತ್ರೀಸಂವೇದನೆಯ ಅಂಶಗಳನ್ನಿಟ್ಟುಕೊಂಡು ಶೋಧನೆಯನ್ನು ಮಾಡಬೇಕಾಗುತ್ತದೆ. ಕಾರಂತರು ನವೋದಯ ಕಾಲಘಟ್ಟದಲ್ಲಿ ಕಾದಂಬರಿಯನ್ನು ರಚಿಸತೊಡಗಿದರೂ, ಮುಂದೆ ಪ್ರಗತಿಶೀಲರ ಸಾಮಾಜಿಕ ಪ್ರಜ್ಞೆಗಿಂತ ಭಿನ್ನವಾಗಿ ಕಾರಂತರು ಕಂಡುಬರುತ್ತಾರೆ. ಅವರು ಮಹಾ ವಾಸ್ತವವಾದಿ ಪರಂಪರೆಯ ಬರಹಗಾರರಾಗಿರುವುದರಿಂದ ಈ ಸಮಾಜ, ಕಲೆ, ಸಾಹಿತ್ಯ, ಸಂಸ್ಕೃತಿ, ಧಾರ್ಮಿಕ, ರಾಜಕೀಯ ಅಂಶಗಳನ್ನು ವಾಸ್ತವವಾದಿ ಪರಂಪರೆಯೊಳಗೆ ಪರಿಷ್ಕರಣೆ ಮಾಡಲು

ಹೊರಡುತ್ತಾರೆ. ಕಾರಂತರು ಸಾಹಿತ್ಯಕ್ಕಾಗಿ ಎಂದೂ ಸಾಹಿತ್ಯ ರಚನೆ ಮಾಡಿದವರಲ್ಲ. ಬದಲಾಗಿ ಸಾಮಾಜಿಕ ಬದ್ಧತೆಗಾಗಿ ಸಾಹಿತ್ಯ ಕೃತಿಯ ಸೃಷ್ಟಿ ಮಾಡಿದ್ದಾರೆ. ಕಾರಂತರ ಕಾದಂಬರಿ ಪ್ರಪಂಚವನ್ನು ಕುರಿತು ಅಧ್ಯಯನ ಮಾಡುವುದೆಂದರೆ, ಅದು ಈ ಸಮಾಜಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿದಂತಾಗುತ್ತದೆ. ಆದ್ದರಿಂದ ಅವರ ಕಾದಂಬರಿಗಳ ಅಧ್ಯಯನ ಇಂದು ಹೊಸ ಪರಾಮರ್ಶೆಯ ನುಡಿಗನ್ನಡಿಯಾಗುತ್ತದೆ. ಸ್ತ್ರೀವಾದದ ತಾತ್ತ್ವಿಕ ಚಿಂತನೆಯ ಬೇರುಗಳನ್ನು ಕಾರಂತರ ಕಾದಂಬರಿಗಳ ಮೂಲಕ ಅನ್ವೇಷಿಸುವ ಪ್ರಯತ್ನವಾಗಿರುವುದರಿಂದ ಸ್ತ್ರೀವಾದದ ಪರಿಕಲ್ಪನೆಗಳನ್ನು ಇಲ್ಲಿ ವಿಸ್ತೃತವಾಗಿ ಪ್ರಸ್ತಾಪಿಸಲಾಗಿದೆ. ಮುಖ್ಯವಾಗಿ ಸ್ತ್ರೀವಾದದಲ್ಲಿ ಬರುವ ಸ್ತ್ರೀ ಮತ್ತು ಸ್ತ್ರೀತ್ವ ಇವುಗಳ ತಾತ್ತ್ವಿಕ ಚರ್ಚೆಯನ್ನು ಕೈಗೆತ್ತಿಕೊಂಡು ಅವುಗಳಲ್ಲಿ-

- ಸಾಂಸ್ಕೃತಿಕವಾಗಿ ಕಂಡುಬರುವ ಸ್ತ್ರೀತ್ವದ ಪ್ರತೀಕಗಳು - ಮಾತೃ ಮೂಲೀಯ ಕುಟುಂಬ ಮತ್ತು ಪಿತೃಮೂಲೀಯ ಕುಟುಂಬ ಪದ್ಧತಿಗಳಲ್ಲಿ ಸಾಂಸ್ಕೃತಿಕವಾಗಿ ವೈದಿಕ ಪರಂಪರೆಯು ಸ್ತ್ರೀತ್ವವನ್ನು ಕಂಡುಕೊಂಡಿರುವುದು ತಿಳಿದುಬರುತ್ತದೆ.
- ಕರಾವಳಿ ಪ್ರದೇಶದ ಸಾಂಸ್ಕೃತಿಕ ಪರಿಸರದಲ್ಲಿ ಮಾತೃ ಮೂಲೀಯ (ಅಳಿಯ ಸಂತಾನಕಟ್ಟು) ಹಾಗೂ ವೈದಿಕ ಸಂಸ್ಕೃತಿ ಮುಖಾಮುಖಿ ಮೂಲಕ ಸ್ತ್ರೀದೇವತೆಗಳ ಪ್ರತಿಬಿಂಬಗಳನ್ನು ಕಂಡುಕೊಂಡಿರುವ ಕ್ರಮಗಳ ಅವಲೋಕನ ಮಾಡಲಾಗಿದೆ.

ಸ್ತ್ರೀವಾದ ಇಂದು ಜಗತ್ತಿನಾದ್ಯಂತ ತನ್ನ ವಿಸ್ತಾರವಾದ ವಿಚಾರಧಾರೆಯನ್ನು ಪ್ರಚುರಪಡಿಸುತ್ತಿರುವ ಈ ಸಂದರ್ಭದಲ್ಲಿ ಸ್ತ್ರೀ, ಸ್ತ್ರೀತ್ವ ಇವುಗಳ ತಾತ್ವಿಕತೆಯ ಬಗ್ಗೆ ಇರುವ ದ್ವಂದ್ವಾತ್ಮಕ ವಿಚಾರಗಳ ವಿಚಾರಮಂಥನದಿಂದ ಸ್ತ್ರೀತ್ವ ಮತ್ತು ಸ್ತ್ರೀಯಾತ್ಮಕತೆ (Femaleness and Femininity) ಇವುಗಳ ನಡುವಿನ ವ್ಯತ್ಯಾಸವನ್ನು ಅರ್ಥೈಸುವ ಪ್ರಯತ್ನ ಮಾಡಲಾಗಿದೆ. ಅದರೊಂದಿಗೆ ದೇಶೀಯ ಸ್ತ್ರೀವಾದಿ ಹಿನ್ನೆಲೆಯಲ್ಲಿ ಮಾತೃಮೂಲೀಯ ಮತ್ತು ಪಿತೃಮೂಲೀಯ ಕೌಟುಂಬಿಕ ಪರಿಸರವು ಸ್ತ್ರೀತ್ವವನ್ನು ಅರ್ಥೈಸಿಕೊಂಡು ಬಂದಿರುವ ಸಾಂಸ್ಕೃತಿಕ ವೈರುಧ್ಯಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ಇದರಿಂದ ಭಾರತೀಯ ನೆಲದಲ್ಲಿಯೇ ಸ್ತ್ರೀವಾದದ ಅನನ್ಯತೆಯನ್ನು ಕಾರಂತರ ಕಾದಂಬರಿ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ ಪರಿಸರದಲ್ಲಿ ಪ್ರಚಲಿತದಲ್ಲಿರುವ ಮಾತೃಮೂಲೀಯ (ಅಳಿಯ ಸಂತಾನಕಟ್ಟು) ಕುಟುಂಬ ಪದ್ಧತಿಯು ಮಾತೃಪ್ರಧಾನ ಕೌಟುಂಬಿಕ ಅಂಶಗಳು ಸ್ತ್ರೀಪ್ರಧಾನತೆಯ ಮೂಲ ಸತ್ವವನ್ನು ಒಳಗೊಂಡಿವೆ. ಆ ಮೂಲಕ ಸ್ತ್ರೀ ಅಧಿಕಾರದ ವ್ಯಾಪ್ತಿಯ ಸ್ಪಷ್ಟ ನೆಲೆಗಳು ಕಂಡುಬಂದಿವೆ. ಇದು ಸ್ತ್ರೀವಾದಿ ನೆಲೆಯ ಮೂಲ ಆಧಾರವಾಗಿದೆ ಎನ್ನಬಹುದು. ಈ ಶೋಧನೆಯಲ್ಲಿ ಮಾತೃಮೂಲೀಯ ವೈದಿಕ ಸಂಸ್ಕೃತಿಗಳ ಮುಖಾಮುಖಿಯನ್ನಾಗಿಸುವುದರ ಮುಖಾಂತರ ಸ್ತ್ರೀದೇವತಾ ಬಿಂಬಗಳ ಪರಿಕಲ್ಪನೆಯ ಮೂಲಕ ಸ್ತ್ರೀ ಪುರುಷ ಸಮಾನತೆಯ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಇದರಿಂದ ದೇಶೀಯ ಸ್ತ್ರೀವಾದಿ ನೆಲೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಪಶ್ಚಿಮದ ಹಾಗೂ ಭಾರತೀಯ ಸ್ತ್ರೀವಾದಿಗಳ ಖಚಿತ ನಿಲುವು, ವಿಚಾರ ಪ್ರಣಾಳಿಕೆ, ಸ್ತ್ರೀ ವೈಚಾರಿಕತೆ ಮುಂತಾದ ವಸ್ತುನಿಷ್ಠ ಅಂಶಗಳನ್ನು ಕ್ರೋಢೀಕರಿಸುವುದರ ಮೂಲಕ ಸ್ತ್ರೀವಾದಿ ನಿಲುವಿನ ಹೊಸ ಸಾಧ್ಯತೆಯನ್ನು ಕಂಡುಕೊಳ್ಳಲಾಗಿದೆ. ಭಾರತೀಯ ಸಮಾಜದಲ್ಲಿ ಅನಾದಿಕಾಲದಿಂದಲೂ ರೂಢಿಯಲ್ಲಿರುವ ಮಾತೃದೇವತಾರಾಧನೆ, ಯೋನಿ ಪೂಜೆ, ಲಜ್ಜಾ ಗೌರಿ - ಮುಂತಾದ ಆರಾಧನಾ ಪರಂಪರೆಗಳು ಸ್ತ್ರೀ ಅಸ್ತಿತ್ವದ ಹೊಳಹುಗಳನ್ನು ಗ್ರಹಿಸಲು ಸಾಧ್ಯವಾಗುವಂತಹ ಅಂಶಗಳಾಗಿವೆ. ಈ ಸೃಷ್ಟಿಯ ಕಾರ್ಯದಲ್ಲಿ ಸ್ತ್ರೀ ಫಲವಂತಿಕೆಯ ಪ್ರತೀಕವಾಗಿರುವುದು ಕಂಡುಬರುತ್ತದೆ. ಇದು ಸ್ತ್ರೀ ಅಸ್ಮಿತೆಯನ್ನು ಗುರುತಿಸಲು ಮೂಲಭೂತ ಅಂಶವಾಗಿದೆ. ಆದರೆ ಒಂದು ಕಡೆ ಸ್ತ್ರೀಪರ ಹೋರಾಟ, ಚಳುವಳಿಗಳು ಸ್ತ್ರೀಯ ಅಸ್ಮಿತೆಯನ್ನು ಗುರುತಿಸುವ ಪ್ರಯತ್ನವಾದರೆ, ಇನ್ನೊಂದು ಕಡೆಯಲ್ಲಿ ಪ್ರಾಚೀನ ಪರಂಪರೆಗಳು ಕಂಡುಕೊಂಡ ಸ್ತ್ರೀ ಆರಾಧನಾ ಪದ್ಧತಿಗಳು ಸ್ತ್ರೀತ್ವದ ಬೇರೆ ಬೇರೆ ನೆಲೆಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ವೇದ ಕಾಲದಲ್ಲಿ ಕಂಡುಕೊಂಡಿರುವ ಸ್ತ್ರೀಪ್ರತೀಕಗಳು ಮತ್ತು ವೈದಿಕ ಸಂಸ್ಕೃತಿಯಲ್ಲಿ ಸ್ತ್ರೀದೇವತೆಗಳ ಪರಿಕಲ್ಪನೆಯನ್ನು ವೈಚಾರಿಕ ಸಮೀಕ್ಷೆಗೊಳಪಡಿಸುವ ಮುಖಾಂತರ ಸ್ತ್ರೀಯರ ತಿರಸ್ಕಾರ ಹಾಗೂ ಪುರಸ್ಕಾರಗಳಿಗೆ ಸಂಬಂಧಿಸಿದ ವಿಚಾರವನ್ನು ಅವಲೋಕಿಸಲಾಗಿದೆ.

ಕಾರಂತರ ಕಾದಂಬರಿಗಳು ಸ್ತ್ರೀತ್ವಕ್ಕೆ ಸಂಬಂಧಿಸಿದ ದ್ವಂದ್ವ ಮಾದರಿಗಳನ್ನು ಭಂಜಿಸುವ ಕ್ರಮದಲ್ಲಿ ಸ್ತ್ರೀತ್ವದ ಶೋಧನೆಯ ಹೊಸ ವಿನ್ಯಾಸ ಕ್ರಮಗಳನ್ನು ರೂಪಿಸುತ್ತವೆ. ಹಾಗಾಗಿ ಕಾರಂತರ ಕಾದಂಬರಿಗಳ ಅಧ್ಯಯನದ ಮುಖಾಂತರ ಸ್ತ್ರೀವಾದಿ ಅಧ್ಯಯನದ ಒಂದು ಮಾದರಿಯಾಗಿ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಶೋಧನೆಯು ಸ್ತ್ರೀತ್ವದ ಹುಡುಕಾಟದ ಧ್ಯೇಯೋದ್ದೇಶವನ್ನು ಹೊಂದಿದೆ.

ಕಾರಂತರ ಕಾದಂಬರಿಗಳಲ್ಲಿ ಕುಟುಂಬ ಕೇಂದ್ರಿತ ಸ್ತ್ರೀತ್ವದ ಮಾದರಿಗಳು ಶೀರ್ಷಿಕೆಯಡಿಯಲ್ಲಿ ಮೂರನೆಯ ಅಧ್ಯಾಯವು ವಿಸ್ತಾರಗೊಂಡಿದೆ. ಶಿವರಾಮ ಕಾರಂತರ ಕಾದಂಬರಿ ಲೋಕವು ಸ್ತ್ರೀ ಜಗತ್ತಿನ ಪರಿವೇಷವನ್ನು ಒಳಗೊಂಡಿದೆ. ಕೌಟುಂಬಿಕ ಕೇಂದ್ರದಲ್ಲಿ ಅನಾವರಣಗೊಳ್ಳುವ ಇಲ್ಲಿನ ಸ್ತ್ರೀಯರು ಕುಟುಂಬ ನಿರ್ವಹಣೆಯ ಮಾದರಿಯಾಗಿ ಕಂಡುಬರುತ್ತಾರೆ. ಇಲ್ಲಿನ ಸ್ತ್ರೀತ್ವದ ಮಾದರಿಗಳನ್ನು ಹೀಗೆ ಗುರುತಿಸಲಾಗಿದೆ.

೧. *ಸ್ತ್ರೀತ್ವ ಕೌಟುಂಬಿಕ ಶಕ್ತಿಯಾಗಿ : ತಾಯ್ತನ V/S ಬಂಜೆತನ; ಮುತ್ತೈದೆ V/S ವಿಧವೆ*

ಕಾರಂತರ ಕಾದಂಬರಿಗಳಲ್ಲಿ ತಾಯ್ತನ *V/S* ಬಂಜೆತನ ; ಮುತ್ತೈದೆ *V/S* ವಿಧವೆ - ಈ ಮಾದರಿಗಳನ್ನು ಗಮನಿಸಿದಾಗ ಕಾರಂತರು ಕುಟುಂಬವಲಯದಲ್ಲಿ ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ಕಾದಂಬರಿಗಳ ಪಾತ್ರ ಚಿತ್ರಣ ಮಾಡುತ್ತಾರೆ. ಪುರುಷಪ್ರಧಾನ ಸಮಾಜ ತಾಯ್ತನವನ್ನು ವೈಭವೀಕರಿಸುತ್ತದೆಯೇ ಹೊರತು ಸ್ತ್ರೀನಿಷ್ಠತೆಯನ್ನು ಪ್ರತಿಪಾದಿಸುವುದಿಲ್ಲ. ಆ ಮೂಲಕ ವೈಧವ್ಯವನ್ನು ಕೇಡಿನ ಸಂಕೇತವಾಗಿ ಬಳಸಿಕೊಳ್ಳುವ ಮೂಲಕ ಅದನ್ನೊಂದು ಧಾರ್ಮಿಕ ಆಚರಣೆಯಾಗಿ ಕಂಡುಕೊಂಡಿದೆ. ಕಾರಂತರು ಈ ಬಗೆಯ ದ್ವಂದ್ವಾತ್ಮಕ ಮಾದರಿಗಳನ್ನು ನಿರಾಕರಿಸುವುದು ಅವರ ಕಾದಂಬರಿಗಳಲ್ಲಿ ಕಂಡುಬರುತ್ತದೆ. 'ಮರಳಿ ಮಣ್ಣಿಗೆ' ಕಾದಂಬರಿಯ ಸರಸೋತಿ - ಪಾರೋತಿಯರು ಈ ಮಾದರಿಯಲ್ಲಿ ಕಾಣಿಸಿಕೊಳ್ಳುತ್ತಾರೆ. ಪಾರೋತಿ - ಮುತ್ತೈದೆ, ಆದರೆ ಬಂಜೆ ಎಂಬುದು ಸಾಬೀತಾಗಿದೆ. ಆದರೆ ತಾಯ್ತನ ಆಕೆಯಲ್ಲಿ ಸಹಜವಾಗಿ ವ್ಯಕ್ತವಾಗಿದೆ. ಸವತಿ ಸತ್ಯಭಾಮೆಯ ಮಗನನ್ನು ತನ್ನ ಗರ್ಭದಿಂದ ಹುಟ್ಟಿದ ಕೂಸೆಂದೇ ಭಾವಿಸುವ ನಿಷ್ಕಲ್ಮಶ ಮಾತೃತ್ವ ಆಕೆಯದಾಗಿದೆ. ಸರಸೋತಿ - ಬಾಲ್ಯ ವಿಧವೆಯಾದರೂ ವೈಧವ್ಯ ಆಕೆಯನ್ನೆಂದೂ 'ಹಿಂಸೆ'ಯ ಕೂಪಕ್ಕೆ ತಳ್ಳಿಲ್ಲ. ಆಕೆಯ ಕಾರ್ಯಕ್ಷಮತೆ, ಇಡೀ ಸಂಸಾರದ ಪರಭಾರೆಯ ಹೊಣೆಗಾರಿಕೆ ಹೊತ್ತವಳು. ತನ್ನ ಶ್ರಮ ಜೀವನದ ದುಡಿಮೆ ಹಾಗೂ ಕರ್ತವ್ಯ ನಿಷ್ಠತೆಯಿಂದ ರಾಮ ಐತಾಳರ ಮನೆಯ ಆಧಾರ ಸ್ತಂಭವಾದ ಸರಸೋತಿಯನ್ನು ಕಾರಂತರು ವಿಶಿಷ್ಟ ವ್ಯಕ್ತಿತ್ವದ ಮಾದರಿಯಾಗಿ ಕಾಣುತ್ತಾರೆ.

ಆದರೆ ಪಾರೋತಿ *V/S* ಸತ್ಯಭಾಮೆಯರ ದ್ವಂದ್ವ ಮಾದರಿಗಳು ತಾಯ್ತನ *V/S* ಬಂಜೆತನದ ಪ್ರತೀಕಗಳಾಗಿ ಕಾರಂತರು ಕಾದಂಬರಿಗಳಲ್ಲಿ ಒಡಮೂಡಿಸುತ್ತಾರೆ. ಏಕೆಂದರೆ ಬಂಜೆ ಈ ಸಮಾಜದಲ್ಲಿ ನಿಕೃಷ್ಟವಾದ, ನಿರುಪಯೋಗಿ 'ವಸ್ತು'ವಾಗಿ ರಾಮ ಐತಾಳರಿಗೆ ಕಾಣುತ್ತದೆ. ಆದರೆ ವಾಸ್ತವವಾಗಿ ಪಾರೋತಿಯ ದೈಹಿಕ ಬಂಜೆತನ ಮಾತ್ರ ನಮಗೆ ಗೋಚರಿಸುತ್ತದೆಯೇ ಹೊರತು ಅವಳ ಅಂತರಂಗದಲ್ಲಿ ಮಾತೃತ್ವದ ವಾತ್ಸಲ್ಯ ಕಂಡುಬರುತ್ತದೆ. ಈ

ಕಾರಣಗಳಿಗಾಗಿಯೇ ಲಚ್ಚ ತನ್ನ ತಾಯಿ ಸತ್ಯಭಾಮೆಗಿಂತ ದೊಡ್ಡಮ್ಮ ಪಾರೋತಿಯನ್ನು ಅಪಾರ ಪ್ರೀತಿಯಿಂದ ಕಾಣುತ್ತಾನೆ. ಪುರುಷಪ್ರಧಾನತೆಯ ಪ್ರತೀಕವಾದ ರಾಮೈತಾಳರು ಆ ಬಗ್ಗೆ ವ್ಯಂಗ್ಯ ಧೋರಣೆಯನ್ನು ತೋರುವುದು ಲಿಂಗರಾಜಕಾರಣದ ಪ್ರತಿನಿಧಿತ್ವದ ಸಾಂಕೇತಿಕ ರೂಪವಾಗಿಯೇ ಎಂಬುದು ಕಾರಂತರ ಸೂಕ್ಷ್ಮ ವ್ಯಾಖ್ಯೆಯಾಗಿದೆ.

ಹೆಣ್ಣನ್ನು ತಾಯಾಗಿ, ಮುತ್ತೈದೆಯಾಗಿ ಆರಾಧಿಸುವ ಪರಂಪರೆಯೇ ಆಕೆಯನ್ನು 'ವಿಧವೆ', 'ಬಂಜೆ' ಎಂದು ತುಚ್ಛವಾಗಿ ಕಾಣುವುದರ ಮೂಲಕ ಈ ಸಮಾಜದಿಂದ ದೂರವಿಡುವ ಸಾಮಾಜಿಕ ಹುನ್ನಾರ ಮಾಡಿದೆ. ಆದರೆ ಇಂತಹ ಮೌಢ್ಯತೆಯನ್ನು ಕಾರಂತರು ತೀವ್ರವಾಗಿ ವಿರೋಧಿಸುತ್ತಾರೆ. ಆದ್ದರಿಂದ ಸಾಮಾಜಿಕವಾಗಿ ಸ್ತ್ರೀ ಅಪಮೌಲೀಕರಣವಾಗುವುದನ್ನು ಕಾರಂತರು ಒಪ್ಪುವುದಿಲ್ಲ. 'ಮೂಕಜ್ಜಿಯ ಕನಸುಗಳು' ಕಾದಂಬರಿಯ ಮೂಕಜ್ಜಿಯು ವಿಧವೆಯಾಗಿ ಕಳೆದ ಕತ್ತಲೆಯ 'ಮೌನ'ದ ಬದುಕನ್ನು 'ಮಾತಾ'ಗಿಸುವ ಕಾರಂತರು ಮೂಕಜ್ಜಿಯನ್ನು ಸ್ತ್ರೀ ವೈಚಾರಿಕತೆ, ಜ್ಞಾನ, ಮಾನವೀಯತೆ, ಇಂದ್ರಿಯಾತೀತ ಶಕ್ತಿಯ ವಿಶಿಷ್ಟ ವ್ಯಕ್ತಿಯನ್ನಾಗಿ ಅನಾವರಣಗೊಳಿಸುತ್ತಾರೆ. ಮೂಕಜ್ಜಿ ಕೊಡುವ ಜೀವನದರ್ಶನ ಜ್ಞಾನಾತೀತವಾದುದಾಗಿದೆ. ಹಾಗೆಯೇ 'ಕರುಳಿನ ಕರೆ', 'ಸಮೀಕ್ಷೆ', 'ಕನ್ಯಾಬಲಿ' ಮುಂತಾದ ಕಾದಂಬರಿಗಳು ಸಾಮಾಜಿಕ, ಕೌಟುಂಬಿಕ ಸಂದರ್ಭಗಳಲ್ಲಿ ಸ್ತ್ರೀಪರ ಕಾಳಜಿಗಳನ್ನು ಗೌರವಿಸುತ್ತವೆ. ತಾಯ್ತನದ ವೈಭವೀಕರಣ ಹಾಗೂ ಮುತ್ತೈದೆತನದ ವೈಭವೀಕರಣಗಳು 'ಬಂಜೆ'-'ವಿಧವೆ' ಎಂಬುದರ ಅವಜ್ಞೆಯನ್ನು ಪುಷ್ಟೀಕರಿಸುವ ಸಾಂಪ್ರದಾಯಿಕ ಮೌಲ್ಯಗಳು ಕಾರಂತರ ತೀಕ್ಷ್ಣವಾದ ಆರೋಪಕ್ಕೆ ಗುರಿಯಾಗುತ್ತವೆ. ಇದರಿಂದ ಕಾರಂತರು ಹೆಣ್ಣಿನ ಸುತ್ತ ಬಿಗಿಯಲ್ಪಟ್ಟ ಸಂಪ್ರದಾಯ, ಸಂಸ್ಕೃತಿಯ, ಧಾರ್ಮಿಕ ಬೇಲಿಯ ಸಂಕೋಲೆಗಳಿಂದ ವಿಮುಕ್ತಿಗೊಳಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಪರಿಸರದಲ್ಲಿ ಮಾತೃಮೂಲೀಯ ಕೌಟುಂಬಿಕ ಪರಿಸರವೂ ಕೂಡ ವಿಶೇಷವಾಗಿ ಸ್ತ್ರೀ ಅಸ್ಮಿತೆಯ ನೆಲೆಯನ್ನು ಪುಷ್ಟೀಕರಿಸುತ್ತದೆ.

೨. ***ಕೌಟುಂಬಿಕ ಅಧಿಕಾರ ಮತ್ತು ಅಧಿಕಾರೇತರ ಪ್ರಕ್ರಿಯೆಗಳು: ಸ್ತ್ರೀಯ ಜ್ಞಾನ ರೂಪಗಳು - ಕೇಡು V/S ಒಳ್ಳೆತನ ; ದುಡಿಮೆಯ ಕೌಶಲಗಳು***

ಈ ಅಂಶಗಳನ್ನು ಕಾರಂತರು ನೋಡುವ ಕ್ರಮ ಭಿನ್ನವಾಗಿದೆ. ಕೌಟುಂಬಿಕ ಪರಿಸರದಲ್ಲಿ ಅಧಿಕಾರವೆಂಬುದು ಇಡೀ ಕುಟುಂಬವನ್ನೇ ನಿಯಂತ್ರಿಸುತ್ತದೆ. ಅಂತಹ ಸಂದರ್ಭಗಳಲ್ಲಿ ಸ್ತ್ರೀಯು ಎಂತಹ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ ಎಂಬುದು ಕಾರಂತರು ಕಾದಂಬರಿಯಲ್ಲಿ ವಿವರಿಸುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರ ವಿಕೇಂದ್ರೀಕರಣಗೊಂಡರೆ, ಕೌಟುಂಬಿಕ ವ್ಯವಸ್ಥೆಯಲ್ಲಿ ಅಧಿಕಾರ ಎಂಬುದು ಪುರುಷನಲ್ಲಿ

ಕೇಂದ್ರೀಕೃತಗೊಂಡಿರುವುದನ್ನು ಕಾಣುತ್ತೇವೆ. ಕಾರಂತರು ಇಂತಹ ಅಸಂವಿಧಾನಿಕ ಅಧಿಕಾರ ಶಾಹಿ ವ್ಯವಸ್ಥೆಯನ್ನು ಕೌಟುಂಬಿಕ ವ್ಯವಸ್ಥೆಯಲ್ಲಿ ಅಧಿಕಾರ ಎಂಬುದು ಪುರುಷನಲ್ಲಿ ಕೇಂದ್ರೀಕೃತಗೊಂಡಿರುವುದನ್ನು ಕಾಣುತ್ತೇವೆ. ಕಾರಂತರು ಇಂತಹ ಅಸಂವಿಧಾನಿಕ ಅಧಿಕಾರಶಾಹಿ ವ್ಯವಸ್ಥೆಯನ್ನು ಕೌಟುಂಬಿಕ ಪರಿಸರದಿಂದ ದೂರ ಇಡುತ್ತಾರೆ. ಅಂದರೆ ಕುಟುಂಬದಲ್ಲಿ ಗಂಡು - ಹೆಣ್ಣು ಸಮಾನ ಅಧಿಕಾರ ಹೊಂದಿರುತ್ತಾರೆಂಬುದು ಕಾರಂತರ ಕಾದಂಬರಿಗಳ ಪ್ರಧಾನ ಆಶಯವಾಗಿದೆ.

'ಮರಳಿ ಮಣ್ಣಿಗೆ 'ಯ ರಾಮೈತಾಳರು ಪುರುಷಾಧಿಕಾರದ ಪ್ರತಿನಿಧಿಯಾಗುತ್ತಾರೆ. ಹಾಗೆಯೇ ಇಡೀ ಸಂಸಾರದ ಕಾರ್ಯ ಸಂವಿಧಾನ ಸರಸೋತಿ - ಪಾರೋತಿಯರಾದರೂ ಐತಾಳರು ಯಜಮಾನಿಕೆಯ ಪಾರುಪತ್ಯವನ್ನು ಮಾಡುತ್ತಾರೆ. ಮರಳಿ ಮಣ್ಣಿಗೆಯಲ್ಲಿ ಅಧಿಕಾರ ಮತ್ತು ಶ್ರಮ ವಿರುದ್ಧ ದಿಕ್ಕಿನಲ್ಲಿ ಚಲಿಸುವುದನ್ನು ಕಾಣಬಹುದು. ಇದರಿಂದ ಕಾರಂತರು ಅಸಮಾನ ಅಧಿಕಾರಕೇಂದ್ರಗಳನ್ನು ಒಡೆಯುತ್ತಾರೆ. ಸರಸೋತಿ ವಾಸ್ತವವಾಗಿ ಅಧಿಕಾರಕೇಂದ್ರಿತ ಮಾದರಿಯಾಗುತ್ತಾಳೆ. ಹಾಗೆಯೇ ನಾಗವೇಣಿಯು ಕೂಡಾ ಕೌಟುಂಬಿಕ ಹೊಣೆಯನ್ನರಿತು ದುಡಿಯುವ ಪ್ರಕ್ರಿಯೆ ಗಮನಾರ್ಹವಾದುದು. ರಾಮೈತಾಳರಿಗಿಂತ ಲಚ್ಚ ಪಲಾಯನವಾದಿಯಾಗುತ್ತಾನೆ. ಈತ ಸಂಪೂರ್ಣ ಬೇಜವಾಬ್ದಾರಿಯುತ ವ್ಯಕ್ತಿಯಾಗುತ್ತಾನೆಯೇ ಹೊರತು ಹೊಣೆಗಾರಿಕೆಯನ್ನು ನಿರ್ವಹಿಸುವುದಿಲ್ಲ. ಆದ್ದರಿಂದ ಗಂಡು - ಅಧಿಕಾರ ; ಹೆಣ್ಣು - ಅಧಿಕಾರರಹಿತೆ ಎಂಬ ಮಾತನ್ನು ಕಾರಂತರು ಭಂಜಿಸುವ ಮೂಲಕ ಸ್ತ್ರೀ ಅಧಿಕಾರ ಕೇಂದ್ರ ಮತ್ತು ಯಜಮಾನಿಕೆಯ ಅಸ್ತಿತ್ವವನ್ನು ಸ್ಪಷ್ಟಪಡಿಸುತ್ತಾರೆ.

'ಮರಳಿ ಮಣ್ಣಿಗೆ ' ಕಾದಂಬರಿಯ ಸರಸೋತಿ - ಪಾರೋತಿಯರು ಐತಾಳರ ಯಜಮಾನಿಕೆಯ ವ್ಯೂಹದಲ್ಲಿ ಸಿಲುಕುವ ಪ್ರಕ್ರಿಯೆಗಳನ್ನು ಕಾಣಬಹುದು. 'ಸರಸಮ್ಮನ ಸಮಾಧಿ'ಯ ಸರಸಮ್ಮ, ಸುನಾಲಿನಿ ; ಕನ್ಯಾಬಲಿಯ ಮಾಲತಿ, ಕರುಳಿನ ಕರೆಯ ಭಾಗೀರಥಿ, 'ಕನ್ನಡಿಯಲ್ಲಿ ಕಂಡಾತ 'ದ ಕಾವೇರಿ ; 'ಧರ್ಮರಾಯನ ಸಂಸಾರ 'ದ ಮಹಾಲಕ್ಷ್ಮೀ ಹಾಗೂ ಸರಸ್ವತಿಯರು, 'ಮೂಕಜ್ಜ ಕನಸುಗಳು'ವಿನ ವಿಧವೆ ಮೂಕಜ್ಜಿ, 'ಸ್ವಪ್ನದ ಹೊಳೆ 'ಯ ಬನ್ನಿ ಹಾಗೂ 'ಇಳೆಯೆಂಬ'ದ ಜ್ವಾಲಾ - ಮುಂತಾದ ಮಹಿಳೆಯರು ಕೌಟುಂಬಿಕ ಪರಿಸರದಲ್ಲಿ ಅಧಿಕಾರ - ಅಧಿಕಾರೇತರ ಪ್ರಕ್ರಿಯೆಯ ರಾಜಕಾರಣದಲ್ಲಿ ಪ್ರತಿಬಿಂಬಿತರಾಗಿರುವುದನ್ನು ಕಾಣಬಹುದು. ಇಲ್ಲಿ ಅವರ ದಿಟ್ಟ ನಿಲುವುಗಳು, ಪರಿಸ್ಥಿತಿಯನ್ನು ಎದುರಿಸುವ ಛಲ ಬಹಳ ಮುಖ್ಯವಾಗುತ್ತದೆ.

ಸ್ತ್ರೀಲೈಂಗಿಕತೆ (Female Sexuality)ಯ ವಿಚಾರದಲ್ಲಿ ಪುರುಷ ನಿರ್ಮಿತ ಅಧಿಕಾರ ಪ್ರಕ್ರಿಯೆಗಳು ಕಾರಂತರ ಕಾದಂಬರಿಗಳಲ್ಲಿ ಕಂಡುಬರುತ್ತವೆ. ಅಂದರೆ ಪುರುಷ ತನ್ನ ಅಮೂರ್ತರೂಪಿ ಅಧಿಕಾರವನ್ನು ಕುಟುಂಬದಲ್ಲಿ ಹಲವು ದೃಷ್ಟಿಕೋನಗಳಿಂದ ವಿಸ್ತಾರಗೊಳಿಸುತ್ತಾನೆ. ಲೈಂಗಿಕ ಸ್ವಾತಂತ್ರ್ಯ ಪುರುಷನಿಗೆ ಮಾತ್ರ ಮೀಸಲಾಗಿರುವುದು - ಸ್ತ್ರೀಯರು ಇದರಿಂದ ಹೊರತಾಗುತ್ತಾರೆ. ಏಕೆಂದರೆ ಲೈಂಗಿಕ ಪಾವಿತ್ರ್ಯದ ಪ್ರಶ್ನೆ ಕೇವಲ ಸ್ತ್ರೀಯರಿಗೆ ಮಾತ್ರ ವಿಧಿಸಲಾಗುತ್ತಿದೆ. ಪುರುಷ ಸಮಾಜದ ದಬ್ಬಾಳಿಕೆಯಿಂದ ಆಕೆಯ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿದೆ. ಪುರುಷಪ್ರಧಾನ ಸಮಾಜದಲ್ಲಿರುವ ಹೆಣ್ಣಿಗೊಂದು ಅಧಿಕಾರ ಹಾಗೂ ಗಂಡಿಗೊಂದು ಅಧಿಕಾರ ನಿಗದಿಪಡಿಸುವುದನ್ನು ಕಾರಂತರು ವಿರೋಧಿಸುತ್ತಾರೆ. ಇಂತಹ ದ್ವಂದ್ವಾತ್ಮಕ ನಿಯಮಗಳನ್ನು ಇಲ್ಲಿನ ಸ್ತ್ರೀಯರು ಮೀರುವ ಮೂಲಕ ಪುರುಷಕೇಂದ್ರಿತ ಲಿಂಗರಾಜಕಾರಣವನ್ನು ಬಯಲುಗೊಳಿಸುತ್ತಾರೆ. ಲೈಂಗಿಕ ಸ್ವಾತಂತ್ರ್ಯ ಎಂಬುದು ಗಂಡು - ಹೆಣ್ಣು ಇಬ್ಬರಿಗೂ ಸಮಾನವಾಗಿರಬೇಕು. ಆಗ ದಾಂಪತ್ಯ ಜೀವನ ಸುಗಮವಾಗಿ ಸಾಗಲು ಸಹಕಾರಿಯಾಗುತ್ತದೆ.

ಕುಟುಂಬದಲ್ಲಿ ಮಹಿಳೆ ಎದುರಿಸುವ ಲೈಂಗಿಕತೆ, ದಾಂಪತ್ಯ ಜೀವನದ ಹೊಂದಾಣಿಕೆ, ಮಕ್ಕಳ ಲಾಲನೆ - ಪಾಲನೆ ಮುಂತಾದ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತಾಳಾದರೂ ಪುರುಷನ ವ್ಯಕ್ತಿ ಸ್ವಾತಂತ್ರ್ಯ ಅವಳಿಗಿಲ್ಲ. ಆದರೆ ಇಡೀ ಕುಟುಂಬದ ಕಾರ್ಯನಿರ್ವಹಣೆಯ ಜವಾಬ್ದಾರಿ ಮಾತ್ರ ಸ್ತ್ರೀಯ ಮೇಲಿರುತ್ತದೆ. ಆದರೆ ಮಾತೃಪ್ರಧಾನ ಕುಟುಂಬ ಪದ್ಧತಿಗಳಲ್ಲಿ ಸ್ತ್ರೀ ಹೆಚ್ಚು ಅಧಿಕಾರ ಹೊಂದಿರುತ್ತಾಳೆ. ಪುರುಷಪ್ರಧಾನ ಕುಟುಂಬ ಪದ್ಧತಿಗಳ ವಾತಾವರಣದಲ್ಲಿ ಪುರುಷನ ಯಜಮಾನಿಕೆ ರಾಜಕಾರಣದಲ್ಲಿ, ಮಹಿಳೆ ಯಾವ ಪ್ರಭುತ್ವವನ್ನೂ ಸಾಧಿಸಲು ಅಸಮರ್ಥಳಾಗುತ್ತಾಳೆ. ಕಾರಂತರ ಪ್ರಮುಖ ಕಾದಂಬರಿಗಳು ಈ ಬಗೆಯ ಸ್ತ್ರೀವಾದಿ ಸಂವೇದನೆಗಳ ನೆಲೆಗಳನ್ನು ಗುರುತಿಸುತ್ತವೆ. ಲೈಂಗಿಕ ಪಾವಿತ್ರ್ಯದ ಪ್ರಶ್ನೆ ಎದುರಾದಾಗ 'ಕನ್ನಡಿಯಲ್ಲಿ ಕಂಡಾತ'ದ ಕಾವೇರಿ ತೀವ್ರವಾಗಿ ಅದನ್ನು ಪ್ರತಿಭಟಿಸುತ್ತಾಳೆ. 'ನಂಬಿದವರ ನಾಕ ನರಕ'ದಲ್ಲಿ ಸತ್ಯಭಾಮೆ ಹಾದರದ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಅದರಿಂದ ಅವಳು ವಿಚಲಿತಳಾಗದೇ ಧೈರ್ಯದಿಂದ ಅದನ್ನು ಗೆಲ್ಲುತ್ತಾಳೆ. ಅವಳ ಸಹಾಯಕ್ಕೆ ತಳಿಶಾಸ್ತ್ರ (Genetics) ನೆರವಿಗೆ ಬರುತ್ತದೆ. ಕಾರಂತರು ಆಧುನಿಕ ವಿಜ್ಞಾನವನ್ನು ತರುವುದರ ಮೂಲಕ ಮಾನವೀಯತೆಯ ಪ್ರಶ್ನೆಯನ್ನು ಮುಂದಿಡುತ್ತಾರೆ. ಒಂದು ಕೃತಿಯನ್ನು ಶೋಧಿಸಲು ಹೊರಟಾಗ ಅದರ ಅಂತರಂಗದ ಮೌಲಿಕ ಅಂಶಗಳನ್ನು

ಅನ್ವೇಷಿಸುವುದು ಇಲ್ಲಿನ ಪ್ರಾಮಾಣಿಕ ಪ್ರಯತ್ನವಾಗಿದೆ. ಮಾನವೀಯ ಮೌಲ್ಯಗಳು, ಮಾನವ ಹಕ್ಕುಗಳು ಇವೆಲ್ಲವೂ ಮನುಷ್ಯನ ಬದುಕಿಗೆ ಪೂರಕವಾಗಬೇಕೆ ಹೊರತು, ಮಾರಕವಾಗಬೇಕಿಲ್ಲ. ಶೋಷಿತರಿಗೆ ಬೇಕಾಗಿರುವುದು ಅನುಕಂಪಕ್ಕಿಂತ ಸಹಾಯ ಮಾಡುವುದು ಮಾನವೀಯ ಮೌಲ್ಯವಾಗುತ್ತದೆ.

ಕಾರಂತರ ಕಾದಂಬರಿಗಳಲ್ಲಿ ಸ್ತ್ರೀತ್ವದ ಪ್ರತೀಕಗಳು : ಸಮಾಜಮುಖಿ ಎಂಬ ಶೀರ್ಷಿಕೆಯಡಿಯಲ್ಲಿ ನಾಲ್ಕನೆಯ ಅಧ್ಯಾಯ ತೆರೆದುಕೊಳ್ಳುತ್ತದೆ. ಮಾನವ ಹಾಗೂ ನಿಸರ್ಗದ ಸಂಬಂಧ ತುಂಬಾ ಅನ್ಯೋನ್ಯವಾದುದು. ಕಾರಂತರು ಮನುಷ್ಯ ಮತ್ತು ನಿಸರ್ಗದ ನಡುವೆ ನಡೆಯುವ ಸಂಘರ್ಷವನ್ನು ಕಾದಂಬರಿಗಳಲ್ಲಿ ಬಹಳ ಕಾಳಜಿಯಿಂದ ಅನಾವರಣಗೊಳಿಸುತ್ತಾರೆ. ಅದರಲ್ಲಿಯೂ ಸಾಮಾಜಿಕ ಪರಿಸರದಲ್ಲಿ ಬೆಳೆಯುವ ಮಹಿಳೆ ವಿಶ್ವಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ವಿವಿಧ ಆಯಾಮಗಳಲ್ಲಿ ಅಭಿವ್ಯಕ್ತಿಗೊಳಿಸುತ್ತಾಳೆ. ಹಾಗೆಯೇ ಕಾರಂತರು ಸ್ತ್ರೀಯ ಅಸ್ಮಿತೆಯನ್ನು ತಮ್ಮ ಕಾದಂಬರಿಗಳಲ್ಲಿ ವೈವಿಧ್ಯಮಯ ಪ್ರತಿರೂಪಗಳಾಗಿ ಚಿತ್ರಿಸುತ್ತಾರೆ. ಅವುಗಳಲ್ಲಿ ಪ್ರಧಾನವಾಗಿ ಪ್ರಸ್ತುತ ಸಂಶೋಧನೆ ಕಂಡುಕೊಂಡ ಸ್ತ್ರೀ ಪ್ರತೀಕಗಳು ಹೀಗಿವೆ -

೧) ನಿಸರ್ಗಕೇಂದ್ರಿತ ಸ್ತ್ರೀತ್ವದ ಪ್ರತಿರೂಪಗಳು, ೨) ಭೂಮಿ ಕೇಂದ್ರಿತ ಸ್ತ್ರೀತ್ವದ ಪ್ರತಿರೂಪಗಳು, ೩) ದೈವ ಕೇಂದ್ರಿತ ಸ್ತ್ರೀತ್ವದ ಪ್ರತಿರೂಪಗಳು. ಹೀಗೆ ಮೂರು ಮಾದರಿಗಳಲ್ಲಿ ಸ್ತ್ರೀತ್ವದ ಪ್ರತಿರೂಪಗಳನ್ನು ಕಾರಂತರ ಕಾದಂಬರಿಗಳಲ್ಲಿ ಕಂಡುಕೊಳ್ಳಲಾಗಿದೆ.

ಕಾರಂತರ ಕಾದಂಬರಿಗಳು ಅನಾವರಣಗೊಳ್ಳುವುದು ದಕ್ಷಿಣ ಕನ್ನಡದ ಪ್ರಾದೇಶಿಕ ಪರಿಸರದಲ್ಲಿ. ಕಾರಂತರ ನಿಸರ್ಗದ ನಿರ್ವ್ಯಾಜ್ಯ ಪ್ರೇಮ, ಮಾನವ ಸಂಬಂಧ - ಇದರಿಂದ ಸ್ತ್ರೀಯ ಬದುಕಿನ ಮೇಲಾಗುವ ಆಂತರಿಕ ಬದಲಾವಣೆಗಳು ಮತ್ತು ಅದರೊಂದಿಗೆ ಸ್ತ್ರೀ ನಿರಂತರ ಹೋರಾಟ ಮಾಡಿಕೊಂಡು ಬಂದಿರುವ ಅಂಶಗಳನ್ನು ಕಾರಂತರು ಸೂಕ್ಷ್ಮ ಮನಸ್ಸಿನಿಂದ ಚಿತ್ರಿಸುತ್ತಾರೆ. ಮರಳಿ ಮಣ್ಣಿಗೆ ಕಾದಂಬರಿಯ ಸರಸೋತಿ - ಪಾರೋತಿಯರು ನಾಗವೇಣಿ ರಾಮ ಇದರಲ್ಲಿ ಸಹಜವಾಗಿ ಉಂಟಾಗುವ ಕಡಲಿನ ಪ್ರೇಮ, ಕಡಲಿನೊಂದಿಗೆ ಹೊಂದಿಕೊಂಡಿರುವ ಅನೂಹ್ಯ ಕ್ಷಣಗಳು ಮುಖ್ಯವಾಗುತ್ತವೆ. 'ಚಿಗುರಿದ ಕನಸು' ಕಾದಂಬರಿಯ ಶ್ರೀಲಕ್ಷ್ಮೀ, 'ಕುಡಿಯರ ಕೂಸು' ಕಾದಂಬರಿಯ ಕೆಂಪಿ, ಗಿಡ್ಡಿ ಚೆನ್ನಿ, ಬೆಳ್ಳಿ ಮುಂತಾದವರು ಪ್ರಕೃತಿಯೊಂದಿಗೆ ಬೆಳೆದ ಅನನ್ಯತೆಯ ಸಂಕೇತವಾಗಿ ಕಂಡುಬರುತ್ತಾರೆ. ಸ್ವಪ್ನದ ಹೊಳೆ, ಮೈಮನಗಳ ಸುಳಿಯಲ್ಲಿ, ಅಳಿದ ಮೇಲೆ ಮುಂತಾದ ಕಾದಂಬರಿಗಳು ಪ್ರಕೃತಿ

ಮತ್ತು ಮಾನವನ ಸಂಬಂಧಗಳ ಅನನ್ಯತೆಯನ್ನು ಪ್ರತಿಬಿಂಬಿಸುತ್ತವೆ. ಪ್ರಕೃತಿ ಮನುಷ್ಯನ ಜೀವನದ ಮೇಲೆ ಅಗಾಧ ಪರಿಣಾಮವನ್ನು ಬೀರಿರುವುದರಿಂದ ಅಲ್ಲಿನ ಸ್ತ್ರೀಯರ ವ್ಯಕ್ತಿತ್ವ ವಿಕಾಸದ ಹಂತಗಳನ್ನು ಗುರುತಿಸಬಹುದು. ಕಾರಂತರ ಕಾದಂಬರಿಗಳಲ್ಲಿ ಬರುವಂತಹ ಬ್ರಾಹ್ಮಣ ವಿಧವಾ ಸ್ತ್ರೀಯರು ತಮ್ಮ ಪಾಲಿಗೆ ಬಂದ ತುಂಡು ಭೂಮಿಯನ್ನು ಸಾಗುವಳಿ ಮಾಡುವುದರಿಂದ ಅದನ್ನು ಹಸಿರಾಗಿಸಿ, ಜೀವನ ಸಾಗಿಸುವ ಪ್ರಕ್ರಿಯೆ ತುಂಬಾ ಕುತೂಹಲವಾದುದು. ಸಾಮಾನ್ಯವಾಗಿ ಬ್ರಾಹ್ಮಣ ಸ್ತ್ರೀಯರು ಮನೆಯ ಹೊರಗಿನ ದುಡಿಮೆಯಲ್ಲಿ ಭಾಗಿಯಾಗುವುದಿಲ್ಲ. ಆದರೆ ಕಾರಂತರು ಆ ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ಪಾತ್ರಗಳನ್ನು ಚಿತ್ರಿಸುತ್ತಾರೆ.

'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಒಡಮೂಡಿರುವ ಪ್ರಕೃತಿಯ ಅತೀಂದ್ರ ಶಕ್ತಿಯ ದರ್ಶನಗಳನ್ನು ಸುಬ್ರಾಯನ ವೈಚಾರಿಕ ಹಿನ್ನೆಲೆಯಲ್ಲಿ ಪರೀಕ್ಷಿಸುವ ಮೂಕಜ್ಜಿ ಇದರಿಂದ ಸಾವಿರಾರು ವರ್ಷಗಳ ಚಾರಿತ್ರಿಕ ಸತ್ಯಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾಳೆ. ಮಾನವ ವಿಕಾಸದ ಹಂತಗಳನ್ನು ಗುರುತಿಸುವಲ್ಲಿ ಸ್ತ್ರೀಯು ಸೃಷ್ಟಿಕ್ರಿಯೆಯ ಅಧಿದೇವತೆಯಾಗಿರುವ ಸೂಚನೆಗಳು ಕಂಡುಬರುತ್ತವೆ. ಹಾಗಾಗಿ ಕಾರಂತರ ಕಾದಂಬರಿಗಳ ಮೂಲಕ ಲಭಿಸುವ ಸ್ತ್ರೀವಾದದ ನೆಲೆಗಳನ್ನು ಗ್ರಹಿಸಲು ಇದು ಪೂರಕ ಪಠ್ಯವಾಗಿದೆ. 'ಸರಸಮ್ಮನ ಸಮಾಧಿ' ಯಲ್ಲಿಯೂ ಪುರಾಣ - ಆಧುನಿಕತೆಗಳ ಭಂಜನೆಯ ಮೂಲಕ ಪ್ರಕೃತಿ ಹಾಗೂ ವೈಚಾರಿಕತೆಯು ಅನಾವರಣಗೊಳ್ಳುವುದನ್ನು ಕಾಣಬಹುದು.

ಹೆಣ್ಣು ಮತ್ತು ಭೂಮಿಯನ್ನು ಸಮಾನ ದೃಷ್ಟಿಯಲ್ಲಿ ಕಂಡುಕೊಂಡಿರುವ ಈ ಸಮಾಜ ; ಸ್ತ್ರೀಯನ್ನು ಕ್ಷಮಯಾಧರಿತ್ರಿಯನ್ನಾಗಿ ರೂಪಿಸಿದೆ. ಆದರೆ ವಾಸ್ತವವಾಗಿ ಸ್ತ್ರೀಯನ್ನು ಕ್ರೂರವಾಗಿ ಚಿತ್ರಿಸುವ ಮುಖಾಂತರ ದ್ವಂದ್ವಾತ್ಮಕತೆಯನ್ನು ಸೃಷ್ಟಿಸಿದೆ. ಕಾರಂತರ ಕಾದಂಬರಿಗಳಲ್ಲಿ ಈ ಬಗೆಯ ಸಾಂಪ್ರದಾಯಿಕ ಧೋರಣೆಗಳ ನಿರಾಕರಣೆಯನ್ನು ಗುರುತಿಸುವುದು ಸ್ತ್ರೀಪಾತ್ರಗಳ ಮನೋಧರ್ಮವಾಗಿದೆ. ಸಮೀಕ್ಷೆ, ಕರುಳಿನ ಕರೆ ಮುಂತಾದ ಕಾದಂಬರಿಗಳಲ್ಲಿ ಭೂಮಿಯ ಪ್ರಶ್ನೆ ಬಹುಮುಖ್ಯವಾಗಿ ಕಾಣಿಸಿಕೊಂಡಿದೆ. ಸಮಾಜ ಮತ್ತು ರಾಜಕಾರಣ ಕೇಂದ್ರಗಳ ಮೇಲೆ ಬೆಳಕು ಚೆಲ್ಲುವ ಸ್ತ್ರೀ ಮತ್ತು ರಾಜಕಾರಣದ ಅಂಶಗಳನ್ನು ಕಾರಂತರ ಕಾದಂಬರಿಗಳ ಮುಖಾಂತರ ಗ್ರಹಿಸಿರುವುದು ಸಾಧ್ಯತೆಯ ಒಂದು ಅಂಶವಾಗಿದೆ. 'ಇಳೆಯೆಂಬ', 'ಒಂಟಿದನಿ', 'ಕನ್ಯಾಬಲಿ' ಕಾದಂಬರಿಗಳಲ್ಲಿ ಈ ಧೋರಣೆಗಳ ದಟ್ಟ ಪ್ರಭಾವವನ್ನು ಶೋಧಿಸಲಾಗಿದೆ.

ಸ್ತ್ರೀದೈವಿಕತೆಯ ಹಿನ್ನೆಲೆಯಲ್ಲಿ ಕಾರಂತರ ಕಾದಂಬರಿಗಳಲ್ಲಿ ಕಂಡುಬರುವ ದೈವಕೇಂದ್ರಿತ ಸ್ತ್ರೀತ್ವದ ಪ್ರತೀಕಗಳನ್ನು ಗುರುತಿಸಲಾಗಿದೆ. ಸ್ತ್ರೀದೈವತ್ವದ ಸ್ವರೂಪಗಳನ್ನು ಕಂಡುಕೊಂಡಿರುವ ಪುರುಷಕೇಂದ್ರಿತ ಸಂಸ್ಕೃತಿ ಆಕೆಯನ್ನು ನಂಬಿಕೆಯ ಆಧಾರದ ಮೇಲೆ ವೈಭವೀಕರಿಸಲಾಗುತ್ತಿದೆ. ಕಾರಂತರು ಸರಸಮ್ಮನ ಸಮಾಧಿ ಕಾದಂಬರಿಯ ಮೂಲಕ ಇಂತಹ ಸಾಂಪ್ರದಾಯಿಕ ನಂಬಿಕೆಯನ್ನು ಪುರಾಣಭಂಜನೆ (Dy-mythification) ಮಾಡುವಲ್ಲಿ ವಾಸ್ತವವಾದಿ ಅಂಶಗಳನ್ನು ಬಹಿರಂಗಗೊಳಿಸುತ್ತಾರೆ. ಕಾರಂತರು 'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಮೂಕಜ್ಜಿ ಕೇವಲ ಅತೀಂದ್ರಿಯ ಶಕ್ತಿಯನ್ನು ಹೊಂದಿದವಳಾದರೂ, ಆಕೆಯ ಅಂತರ ದೃಷ್ಟಿಗೆ ನಿಲುಕುವ ಈ ಸಂಸ್ಕೃತಿಯ ಇತಿಹಾಸ, ಮಾನವಶಾಸ್ತ್ರಗಳ ಚಾರಿತ್ರಿಕ ಸತ್ಯಗಳನ್ನು ಹೊರಹಾಕಿಸುತ್ತಾರೆ. ಹೀಗೆ ದೈವತ್ವದ ಗೋಪುರದಲ್ಲಿರುವ ಅಸತ್ಯಗಳನ್ನು ವೈಚಾರಿಕ ಚಿಂತನೆಗಳ ಮೂಲಕ ಬಹಿರಂಗಗೊಳಿಸುವುದು ಕಾರಂತರ ಕಾದಂಬರಿಗಳ ಪ್ರಧಾನ ಅಂಶವಾಗಿದೆ. ಇದರಿಂದ ಸ್ತ್ರೀತ್ವವನ್ನು ಕಂಡುಕೊಳ್ಳುವ ವಾಸ್ತವವಾದಿ ನಿಲುವನ್ನು ಗ್ರಹಿಸಬಹುದಾಗಿದೆ.

ಸ್ತ್ರೀ - ಪುರುಷ ಅಸಮಾನತೆಯನ್ನು ವಿಶ್ಲೇಷಿಸುವ ಹಿನ್ನೆಲೆಯಲ್ಲಿ ಈ ಅಧ್ಯಾಯ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. 'ಗಂಡು - ಹೆಣ್ಣು' ಎಂಬ ತಾತ್ತ್ವಿಕ ಪರಿಕಲ್ಪನೆ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ನಿರಂತರ ಚರ್ಚೆಯ ವಿಷಯವಾಗಿ ರೂಪುಗೊಂಡಿದೆ. ಅದರ ಸ್ವರೂಪದ ವಿನ್ಯಾಸವನ್ನು ಹೀಗೆ ವಿವರಿಸಲಾಗಿದೆ.

*೧. ಗಂಡು V/S ಹೆಣ್ಣು ಎನ್ನುವ ದ್ವಂದ್ವದ ಆಚೆಗಿನ ಸಂಗತಿಗಳು*

ಈ ಅಂಶಗಳಲ್ಲಿ ಹೆಣ್ಣಿನ ಪರಿಕಲ್ಪನೆ, ಗಂಡಿನ ಅರ್ಥಗ್ರಹಿಕೆಗಳನ್ನು ಗಮನಿಸಿದಾಗ ಸ್ತ್ರೀ ಪುರುಷರಲ್ಲಿ ದೈಹಿಕ ಭಿನ್ನತೆ (ಜೀವಶಾಸ್ತ್ರೀಯವಾಗಿ) ಬಿಟ್ಟರೆ ಬೇರೆ ಯಾವ ವ್ಯತ್ಯಾಸಗಳು ಕಂಡುಬರುವುದಿಲ್ಲ. ಆದರೆ ಪುರುಷ ಸಮಾಜ ಹೆಣ್ಣನ್ನು 'ದುರ್ಬಲತೆ'ಯ ಸಂಕೇತವಾಗಿ ಅರ್ಥೈಸಿದೆ. ಸ್ತ್ರೀವಾದಿಗಳು ಈ ಧೋರಣೆಯನ್ನು ತೀವ್ರವಾಗಿ ಖಂಡಿಸುತ್ತಾರೆ ಹಾಗೂ ಕಾರಂತರೂ ಕೂಡ ಇದನ್ನು ವಿರೋಧಿಸುತ್ತಾರೆ. ಅದಕ್ಕೆ ಕಾರಣ ಪುರುಷಕೇಂದ್ರಿತ ಮೌಲ್ಯಗಳು ಸ್ತ್ರೀಯನ್ನು ಲಿಂಗ ಪ್ರಭೇದ (Gender) ದ ಕಾರಣಕ್ಕಾಗಿಯೇ ತಾರತಮ್ಯವನ್ನು ಮಾಡುತ್ತವೆ.

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕಂಡುಬರುವ ಗಂಡು ಮತ್ತು ಹೆಣ್ಣುಗಳ ಮುಖಾಮುಖಿ ಸಂಘರ್ಷ, ವೈಚಾರಿಕ ದೃಷ್ಟಿಕೋನಗಳು ಗಂಡು V/S ಹೆಣ್ಣು ಎಂಬ ದ್ವಂದ್ವಗಳನ್ನು ಮೀರಿನಿಲ್ಲುತ್ತವೆ.

'ಮರಳಿ ಮಣ್ಣಿಗೆ 'ಯ ಲಚ್ಚ - ನಾಗವೇಣಿ ದಂಪತಿಗಳು ಪರಸ್ಪರ ವೈರುಧ್ಯಗಳಿಂದಲೇ ಕಂಡುಬರುವುದು, 'ನಿರ್ಭಾಗ್ಯ ಜನ್ಮ' ಕಾದಂಬರಿಯ ಆನಂದ - ಭಾಗ್ಯಲಕ್ಷ್ಮೀ, 'ಕನ್ನಡಿಯಲ್ಲಿ ಕಂಡಾತ' ಕಾದಂಬರಿಯ ಪರಮೇಶ್ವರಯ್ಯ - ಕಾವೇರಿಯರು ಇಲ್ಲಿ ಪ್ರಧಾನ ಭೂಮಿಕೆಯಲ್ಲಿ ಬರುತ್ತಾರೆ. ಕಾರಂತರು ಇಂತಹ ಸಾಹಿತ್ಯಕ ದ್ವಂದ್ವಗಳಿಗೆ ಯಾವ ರೀತಿ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ, ಸ್ತ್ರೀವಾದಿ ನಿಲುವಿನಲ್ಲಿ ಅವುಗಳ ಪ್ರಸ್ತುತತೆ ಏನು ? ಪುರುಷಪ್ರಧಾನ ಸಮಾಜವು ಇಂಥ ಅಂಶಗಳನ್ನು ಯಾವ ರೀತಿ ಗ್ರಹಿಸುತ್ತದೆ ಎಂಬುದು ಮುಖ್ಯವಾಗುತ್ತದೆ. 'ಮೈಮನಗಳ ಸುಳಿಯಲ್ಲಿ 'ಯ ಮಂಜುಳೆ, 'ನಂಬಿದವರ ನಾಕ ನರಕ 'ದ ವಾಗ್ದೇವಿ, ಸತ್ಯಭಾಮೆ ; 'ಇನ್ನೊಂದೇ ದಾರಿ', 'ಮೂಕಜ್ಜಿಯ ಕನಸುಗಳು', 'ಮರಳಿ ಮಣ್ಣಿಗೆ ' - ಇತ್ಯಾದಿ ಕಾದಂಬರಿಗಳಲ್ಲಿ ಇಂತಹ ಸ್ತ್ರೀತ್ವದ ಮಾದರಿಗಳನ್ನು ಗುರುತಿಸಲಾಗಿದೆ.

*೨. ಕಲೆ ಮತ್ತು ಸಾಹಿತ್ಯದ ಪ್ರತಿಮಾತ್ಮಕ ರೂಪವಾಗಿ ಸ್ತ್ರೀತ್ವದ ಬಿಂಬಗಳು*

ಕಾರಂತರು ಕಾಣುವ ಕಲಾಜೀವನ, ವಾಸ್ತವದಲ್ಲಿ ಕಂಡುಬರುವ ಮನುಷ್ಯನ ಜೀವನ , ಇವುಗಳ ತೌಲನಿಕ ವಿಚಾರಗಳನ್ನು ಪ್ರಸ್ತುತ ಪಡಿಸುತ್ತಾರೆ. ಅವರ ಕಾದಂಬರಿಗಳ ಅಧ್ಯಯನದಿಂದ ಕಲೆ ಮತ್ತು ಸಾಹಿತ್ಯದ ಸ್ತ್ರೀತ್ವದ ಬಿಂಬಗಳನ್ನು ಗುರುತಿಸಲಾಗಿದೆ. ಕಲೆ ಮತ್ತು ಜೀವನವನ್ನು ಒಂದಾಗಿ ನೋಡುವ ಕಾರಂತರು ಜೀವನದ ಇನ್ನೊಂದು ರೂಪವಾಗಿ ಕಲಾ ಜೀವನವನ್ನು ಕಾಣುತ್ತಾರೆ. 'ಮೈಮನಗಳ ಸುಳಿಯಲ್ಲಿ 'ಯ ಮಂಜುಳೆಯ ಸಂಗೀತದ ಆರಾಧನೆ, 'ಮರಳಿ ಮಣ್ಣಿಗೆ 'ಯ ನಾಗವೇಣಿ ಮತ್ತು ರಾಮ ಇವರ ಸಂಗೀತ ಹಾಗೂ ಚಿತ್ರಕಲೆಯ ಆಸಕ್ತಿ, 'ಮೊಗ ಪಡೆದ ಮನ 'ದ ವ್ಯಾಸ, ಟೂಬಾ, ಇಂದುಮತಿ, 'ಒಂಟಿದನಿ 'ಯ ನಯನತಾರೆ - ಮುಂತಾದವರು ಕಲೆಯಲ್ಲಿ ಅಪ್ರತಿಮ ಸಾಧನೆ ಮಾಡಿದವರು. ಇನ್ನು ಕೆಲವರು ಕಲೆಯನ್ನು ದುರ್ಬಳಕೆ ಮಾಡಿಕೊಂಡು ಜೀವನದ ಅವನತಿಯತ್ತ ಸಾಗಿ, ಕೊನೆಗೆ ಪಶ್ಚಾತ್ತಾಪಪಡುತ್ತಾರೆ. ಒಟ್ಟಿನಲ್ಲಿ ಕಲೆ - ಸಾಹಿತ್ಯ ಅವರ ಬದುಕನ್ನು ಉನ್ನತ ಮಟ್ಟಕ್ಕೇರಿಸಲು ನೆರವಾಗುತ್ತದೆ. ಈ ಸ್ತ್ರೀಯರು ತಮ್ಮ ಜೀವನದ ಕಠಿಣ ಪರಿಸ್ಥಿತಿಯಲ್ಲಿ ಕಲೆಯನ್ನು ಆತ್ಮಸಂಗಾತಿಯಾಗಿ ಕಂಡುಕೊಳ್ಳುವುದು ವಿಶೇಷವಾದ ಸಂಗತಿ ಹಾಗೂ ಅದನ್ನೊಂದು ಬದುಕಿನ ಯಶಸ್ಸನ್ನಾಗಿ ಮಾಡಿಕೊಳ್ಳುತ್ತಾರೆ. ಈ ಕಾರಣಗಳಿಗಾಗಿ, ಕಾರಂತರು ಚಿತ್ರಿಸುವ ಸ್ತ್ರೀಯರು ಬದುಕಿನ ಸಾರ್ಥಕತೆಯನ್ನು ಜೀವನ ಕ್ರಮದಿಂದಲೇ ಕಂಡುಕೊಳ್ಳುವುದು ಅಪೂರ್ವವಾದುದು.

ಸ್ತ್ರೀಕೇಂದ್ರಿತ ಶೋಧನೆ ಇದಾಗಿರುವುದರಿಂದ ಜಗತ್ತಿನ ಸ್ತ್ರೀ - ಪುರುಷ ಅಸಮಾನತೆ, ಸ್ತ್ರೀರಾಜಕಾರಣ, ಲಿಂಗರಾಜಕಾರಣದಂತಹ ವ್ಯತ್ಯಾಸಗಳನ್ನು ಅರ್ಥೈಸಲು ಹೊರಟಿರುವ ಪ್ರಯತ್ನವಾಗಿದೆ. ಸಾಂಪ್ರದಾಯಿಕ ಸಮಾಜದಲ್ಲಿ ಕಂಡುಬರುವ ರೂಢಿಗತ ಮೌಲ್ಯಗಳನ್ನು ಧಿಕ್ಕರಿಸುವ ಮೂಲಕ ಕಾರಂತರು ಸ್ತ್ರೀವಾದಿ ಅಧ್ಯಯನಕ್ಕೆ ಹೊಸ ಭಾಷ್ಯವನ್ನು ಬರೆಯುತ್ತಾರೆ. ಕಾರಂತರ ವಾಸ್ತವವಾದಿ ನಿಲುವು, ಮಹಾಮಾನವತಾವಾದಿ ಧೋರಣೆ, ಸಾಮಾಜಿಕ ಕಳಕಳಿ ಮುಂತಾದ ಅಂಶಗಳು ಅವರ ಸ್ತ್ರೀ ಸಂವೇದನೆಯ ಮೂಲ ಆಶಯಗಳಿಗೆ ಪುರಸ್ಕಾರವನ್ನು ನೀಡುತ್ತವೆ. 'ಮೌನ 'ದಲ್ಲೇ ಹೆರೆಗಟ್ಟಿದ ಜೀವನಕ್ಕೊಂದು 'ಮಾತಿನ ' ಜೀವ ಸೆಲೆಯನ್ನು ಕಾರಂತರು ಆಶಿಸುತ್ತಾರೆ. ಜೊತೆಗೆ ಈ ಕ್ಷೇತ್ರದ ಬಗ್ಗೆ ಮುಂದೆ ನಡೆಯಬೇಕಾದ ಸೂಕ್ಷ್ಮ ಸಲಹೆಗಳನ್ನು ನಿರೂಪಿಸಲಾಗಿದೆ. ಅಂತರಶಿಸ್ತೀಯ ಅಧ್ಯಯನಗಳು ನಡೆಯುವ ಈ ಸಂದರ್ಭದಲ್ಲಿ ಕಾದಂಬರಿಗಳ ಅಧ್ಯಯನದ ವ್ಯಾಪ್ತಿಗೆ ಮತ್ತೊಂದು ಸಂಕೀರ್ಣತೆಯ ಸ್ವರೂಪವನ್ನು ತಂದುಕೊಡುವ ಪ್ರಯತ್ನವಾಗಿದೆ.